133(2)

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 56] ಬುಧವಾರ 5—12—45 [ಬಿಡಿ ಪ್ರತಿ 3 ಪೈ

ನ್ಯಾಯವಿಧಾಯಕ ಸಭೆ

(ವಿಶೇಷ ಪ್ರತಿನಿಧಿಯಿಂದ)

ಬೆಂಗಳೂರು, ಡಿ 4 — ನ್ಯಾಯವಿಧಾಯಕ ಸಭೆಯ ದ್ವಿತೀಯ ದಿವಸದ ಸಮಾವೇಶವು ಈ ದಿವಸ 12 ಘಂಟೆಯಲ್ಲಿ ರಾಜವಂತ್ರ ಪ್ರವೀಣ ಹೆಚ್.ಬಿ. ಗುಂಡಪ್ಪಗೌಡರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸಚಿವಪಂಚವರು ಸಭಾಸನಾರೂಢರಾಗಿದ್ದರು. ಪ್ರೇಕ್ಷಕರ ಸಂಖ್ಯೆ 26 ಮಾತ್ರವಿದ್ದಿತು. ಅತಿಥಿ ವೇದಿಕೆಯ ವೇಲೆ ಪ್ರಕೋಗಿ ಶ್ರೀ ಟಿ. ಕೃಷ್ಣರಾಯರು ನುಡಿಸಿದ್ದರು.

ಪ್ರಶ್ನೋತ್ತರಕಾಲದಲ್ಲಿ ಶ್ರೀಮತಿ ಎಂ ಆರ್. ಲಕ್ಷ್ಮಮ್ಮ, ಎಂ.ಎ. ರವರು 'ಹಿಂದೂ ಲಾ ರಿಫಾರಂ' ವಿಷಯದಲ್ಲಿ ಪ್ರಶ್ನಿಸಲಾಗಿ, ಆಹಾರ ಸಚಿವರಾದ ಜ|| ಓ.ಎಸ್.ಎ. ಷರೀಫರು ಉತ್ತರಕೊಡುತ್ತಾ ಪ್ರತಿನಿಧಿ ಸಭೆಯಿಂದಲಾಗಲೀ ಶಾಸನ ಸಭೆಯಿಂದಲಾಗಲಿ ಈ ಸಮಿತಿಗೆ ಸದಸ್ಯರನ್ನು ಚುನಾಯಿಸಿಲ್ಲವೆಂದೂ ಇರುವ 10 ಮಂದಿ ನಾಮಕರಣ ಸದಸ್ಯರೆಂದೂ ಸ್ತ್ರೀ ಸದಸ್ಯರೊಬ್ಬರು ಸಮಿತಿಯಲ್ಲಿರುವುದಾಗಿಯೂ ಈ ಸಮಿತಿಯು ನಿಯೋಗಗೋಷ್ಠಿ ಹೋಗುತ್ತಿಲ್ಲವಾಗಿಯೂ ತಿಳಿಸಿದರು.

ನಿಮ್ನ ವರ್ಗ ಕ್ಷೇತ್ರದಿಂದ ಚುನಾಯಿತರಾಗಿರುವ ಶ್ರೀ ಗಂಗಾಧರಯ್ಯನವರು 'ಕೂಲಿ ಕಾರಾರು' ಮೇಲಿನ ಪ್ರಶ್ನೆಗಳಿಗೆ ಜ || ಷರೀಫರು ಉತ್ತರಕೊಡುತ್ತಾ ಮಧುಗಿರಿ, ಕೊಪ್ಪ, ಶೃಂಗೇರಿ ಮತ್ತು ಚಿಕ್ಕಮಗಳೂರು ಕೂಲಿ ಕರಾರಿಗೆ ರಿಜಿಸ್ಟರ್ ಆಗಿರುವುದಾಗಿ ತಿಳಿಸಿದರು. ಮುಂದುವರಿಸುತ್ತಾ ಜ ||, ಷರೀಫರು 1943—44 ರಲ್ಲಿ ಮಧುಗಿರಿಯಲ್ಲಿ ಕಾರ್ಖಾನಧಿಯು ತೆರೆದಿಲ್ಲವೆಂದು ಹೇಳಿದರು.

'ಬಿಲ್ಲವ ಅಭಾವ, ಪ್ರತಿನಿಧಿ ಸಭೆಯು ಕಾಂಗ್ರೆಸ ಪಕ್ಷದ ಮುಖಂಡರಾದ ಶ್ರೀ ಹನುಮಂತಯ್ಯನವರ ಮೇಲಿನ ಹೈಕೋರ್ಟಿನ ತೀರ್ಪಿನಲ್ಲಿ ಬ್ರಿಟಿಷ್ ರೆಸಿಡೆಂಟರ ಪ್ರವೇಶದಲ್ಲಿ ಈಗ ಬಯಲಾಗಿರುವ ವಿಷಯ ಮತ್ತು ಅಕ್ಕಿ ಮಿಲ್ ಮಾಲೀಕರ ಬಗ್ಗೆ ನಿಲುವಳಿ ಸೂಚನೆಗಳು ಬಂದಿದ್ದವು. ಅಧ್ಯಕ್ಷರು ಇವುಗಳು ಅನಾವಶ್ಯಕವೆಂದು ತಳ್ಳಿ ಹಾಕಿದರು.

ಈ ಕೆಳಗೆ ಕಂಡಮೂರೂದೆಗಳು ಏಳು ಚರ್ಚೆಯಾದನಂತರ, ತಿದ್ದುಪಡಿ ಸೂಚಿಸಲ್ಪಟ್ಟು ಅಂಗೀಕೃತವಾದವು

1 ಮೈಸೂರು ನಗರಾಭಿವೃದ್ಧಿ ಮಸೂದೆ 2 ಕ್ರಿಮಿನಲ್ ಪ್ರೊಸಿಜರ್ ಮಸೂದೆ 3 ಮೈಸೂರು ಕಂಪೆನಿಗಳ ಮಸೂದೆ 4 ಮೈಸೂರು ಮೋಟಾರು ಮತ್ತು ರಸ್ತೆ ಮಸೂದೆ 5 ಸರ್ಕಾರದ ಮೇಲಿನ ಕೋರ್ಟು ವ್ಯವಹಾರ

ಭಾರತೀಯರಿಂದ ಬಹಿಷ್ಕಾರ !

ಪೀಟರ್‌ಮಾರಿಸ್‌ಬರ್ಗ್, ಡಿ 3

ಏಷಿಯಾ ಜನರಿಗಾಗಿ ಇಡಲಾಗಿದ್ದ 41 ಮ್ಯುನಿಸಿಪಲ್ ಸೈಟುಗಳ ಹರಾಜು ನಡೆಯಿತು. ಭಾರತೀಯರು ಅದನ್ನು ಬಹಿಷ್ಕರಿಸಿದರು. ಈ ಸೈಟುಗಳಿಗೆ ಸಂಬಂಧಿಸಿದ ಷರತ್ತುಗಳು ಜನಾಂಗ ಪ್ರತ್ಯೇಕವಿಡುವಂಥಾದ್ದಾಗಿದ್ದವು.

ವಾಷಿಂಗ್ಟನ್, ಡಿ 3 — ಜಪಾನಿನ ಮೇಲೆ ಅಣು ಬಾಂಬು ಉಪಯೋಗಿಸುವಂತೆ ಅಧ್ಯಕ್ಷ ಟ್ರೂಮನ್‌ರೇ ನಿರ್ಧರಿಸಲ್ಪಟ್ಟಿದ್ದರೆಂದು ಸಂಯುಕ್ತ ಸಂಸ್ಥಾನದ ರಸಾಯನ ಶಾಸ್ತ್ರಜ್ಞ ಡಾ || ಮೆನ್ಜರರು ಹೇಳಿದ್ದಾರೆ.

ನೂರೆಂಬರ್ಗ್, ಡಿ 3 — ನಾಜೀಯುದ್ಧ ಪಾತಕಿಗಳ ವಿಚಾರಣೆಯಲ್ಲಿ ಯುಗೋಸ್ಲೋವಿಯಾ ಮೇಲಿನ ಅತ್ಯಾಚಾರ ವಿಷಯ ಹೊರಪಡಿಸಿದ್ದಾರೆ.

ವಾಷಿಂಗ್ಟನ್ ಡಿ 3 — ಪರ್ಷಿಯದಿಂದ ಹೊರದೇಶ ಸೈನ್ಯಗಳು ವಾಪಸಾಗಬೇಕೆಂಬ ಅಮೇರಿಕಾ ಮನವಿಗೆ ರಷ್ಯಾ ಅದು ಆಗುವುದಿಲ್ಲವೆಂದು ಉತ್ತರ ಕೊಟ್ಟಿದೆ. ಬ್ರಿಟಿಷರ ಉತ್ತರ ಇನ್ನೂ ಬಂದಿಲ್ಲ.

ಬಟಾವಿಯಾ ಡಿ 3 — ಬ್ರಿಟಿಷರು ಸವರಾಂಗಿನ ಮೇಲೆ ಷೆಲ್ ಹೊಡೆಯುತ್ತಿದ್ದಾರೆ. ಬಾಂಡಾಂಗಿಸಲ್ಲಿ ದಂಗೆ ಆರಂಭವಾಗಿದೆ.

ಲಂಡನ್ ಡಿ 3 — ನಾಳೆಯ ದಿವಸ ಸರ್ಕಾರದವರು ಭಾರತ ವಿಷಯದಲ್ಲಿ ಒಂದು ಪ್ರಮುಖ ಹೇಳಿಕೆ ಕೊಡಬಹುದೆಂದು ನಿರೀಕ್ಷಿಸಲಾಗಿದೆಯೆಂದೂ ಭಾರತ ಬಿಕ್ಕಟ್ಟು ಪರಿಹರಿಸಲು ಈ ಯೋಜನೆಯೆಂದೂ ಹೇಳಲಾಗಿದೆ.

ವಾರ್ಧ ಡಿ 4 — ಗಾಂಧೀಜೀಯವರ ಹರಿಜನ ನುಂದಿನ ತಿಂಗಳಿಂದ ಪ್ರಕಟವಾಗುವುದು.

ಗುಂಟೂರು ಡಿ 2 — ಇಲ್ಲಿಯ ವಿದ್ಯಾರ್ಥಿಗಳು ಸಭೆ ನಡೆಸಿ ಕೂಡಲೆ ಅಲಿಧ್ರ ಪ್ರಾಂತ್ಯ ಸ್ಥಾಪನೆಯಾಗಬೇಕೆಂಬ ಠರಾವು ಮಾಡಿದ್ದಾರೆ.

ರ 6 ಅಧಿಕ ಲಾಭ ತೆರಿಗೆ

ಮೈಸೂರು ನಗರಾಭಿವೃದ್ಧಿ ಮಸೂದೆಯ ಮೇಲೆ ಏಳ ಚರ್ಚೆಯಾದನಂತರ ಅಧ್ಯಕ್ಷರು ಸಭೆಯ ಅನುಮೋದನೆಯನ್ನು ಕೇಳುತ್ತಿದ್ದಾಗ ಆರೋಗ್ಯ ಸಚಿವರಾದ ಡಾ || ರಾಯರ್‌ರವರು ತಮ್ಮ ಅಭಿಮತವನ್ನು ಕೊಡಲಿದ್ದರು. ಆ ವೇಳೆಯಲ್ಲಿ ಸಭೆಯು ಏ ಅ್ಯಂಡ್ ನೇ (ಇಲ್ಲ ಮತ್ತು ಉಂಟು) ಎಂಬುದಾಗಿ ಕೂಗುತ್ತಿತ್ತು. ಅನಂತರ ಮತಗಣನೆಗೆ ಕೇಳಿದರು. ಈ ಬಗೆಯಿಂದ ಅಧ್ಯಕ್ಷಸ್ಥಾನಕ್ಕೆ ಧಕ್ಕೆ ತಗಲುವುದು ಎಂದು ಡಾ || ರಾಯರ್ ಹೇಳಿದಮೇಲೆ ಪರ 38 ಮತ್ತು ವಿರೋಧ 18 ಓಟುಗಳು ಬಂದವು.

ಎ.ಐ.ಸಿ.ಸಿ. ಅಧಿವೇಶನದ ಚಲನಚಿತ್ರ ಪ್ರದರ್ಶನಕ್ಕೆ ಪ್ರತಿಬಂಧಕ ಹಾಕಲ್ಪಟ್ಟಿರುವ ಒಗ್ಗೆ ಕಳುಹಿಸಿದ್ದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು.

ಮೈಸೂರು ಸಂಸ್ಥಾನದ ನುಹಳಾ ಸಮ್ಮೇಳನದವರು ಡಾ || ಅಲ್ಬುಕರ್ಕರಿಗೆ ಕೊಟ್ಟ ನಿಧಿಯ ಬಗ್ಗೆ ಬಂದ ನಿಲುವಳಿ ಸೂಚನೆಯನ್ನು ಅಧ್ಯಕ್ಷರು ಒಪ್ಪಲಿಲ್ಲ.

ಮೈಸೂರು ಅಂತರ್ಯಾಡಳಿತಕ್ಕೆ ಬ್ರಿಟಿಷ್ ರೆಸಿಡೆಂಟರು ಪ್ರವೇಶಿಸುವುದು ಸಮ್ಮತವಲ್ಲವೆಂದು ಕಳಹಿಸಲ್ಪಟ್ಟಿದ್ದ ನಿಲುವಳಿ ಸೂಚನೆಯ ಚರ್ಚೆಗೆ ಅಧ್ಯಕ್ಷರು ಅವಕಾಶ ಕೊಡಲಿಲ್ಲ.

ಮದರಾಸು, ಡಿ 4 — ಕನ್ನಡ ಸಾಹಿತ್ಯ ಪರಿಷತ್ತಿನ 29 ನೇ ಅಧಿವೇಶನವು ಪ್ರಥಮ ಭಾರಿ ಇಲ್ಲಿ ಈ ತಿಂಗಳು 26 27 ಮತ್ತು 29 ರಲ್ಲಿ ನಡೆಯುವುದು ಡಾ || ಯು. ರಾಮರಾಯರು ಸ್ವಾಗತ ಸಮಿತಿ ಅಧ್ಯಕ್ಷರಾಗಿಯೂ, ಶ್ರೀ ಟಿ.ಪಿ. ಕೈಲಾಸಂ ಅಧಿವೇಶನಾಧ್ಯಕ್ಷರಾಗಿಯು ಇರುವರು. ಇಲ್ಲಿನ ಸಮ್ಮೇಳನ ಕಾಲದಲ್ಲಿ ಸಹಾಯ ಮಾಡಲು ಸ್ಥಳೀಯ ಶಾಲಾ ಕಾಲೇಜುಗಳ ಕನ್ನಡಿಗರ ಸ್ವಯಂ ಸೇವಕದಳ ಸ್ಥಾಪನೆಯಾಗಿದೆ.

ಉಪನ್ಯಾಸ

ಮೈಸೂರು ಡಿ 5— ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಸಂಬಂಧದಲ್ಲಿ, ಮೈಸೂರು ಮಹಾರಾಜಾ ಕಾಲೇಜಿನ ಹಿಸ್ಟರಿ ಪ್ರೊಫೆಸರ್ ಡಾ || ಕೆ. ಎ. ವೆಂಕಟಸುಬ್ಬಾಶಾಸ್ತ್ರಿಗಳು, ಚಿಕ್ಕವಗಳೂರು ಟೌನ್‌ಹಾಲಿನಲ್ಲಿ ಡಿಸೆಂಬರ್ 14 ನೇ ತಾ || ಶುಕ್ರವಾರ ಸಂಜೆ ' 1926 ರಿಂದ 1941 ರವರಿಗಿನ ಮೈಸೂರಿನ ರಾಜ್ಯಾಡಳಿತ ' ಎಂಬ ವಿಷಯವಾಗಿ ಉಪನ್ಯಾಸ ನೀಡುವರು.

ನೇತಾಜಿ ಗೌರವಾರ್ಥ

ಕಲ್ಕತ್ತಾ ಡಿ 2— ಎಲ್ಗಿನ್ ರೋಡನ್ನು ' ನೇತಾಜಿ ಸುಭಾಷ ಚಂದ್ರ ಬೀ ವಿನ್ಯು ' ಎಂದು ಕರೆಯುಬೇಕೆಂದು ತಾ|| 5 ರಲ್ಲಿ ನಡೆಯುವ ಕಾರ್ಪೊರೇಷನ್ ವಿಾಟಿಂಗಿಗೆ ಶ್ರೀ ಕವಿರಾಜ ಸತ್ಯವ್ರತ ಸೆನ್ನ ಒಂದು ಠರಾವು ಕಳಿಸಿದ್ದಾರೆ.

ಹರಿಜನೋದ್ಧಾರ

ಜಬ್ಬಲ್ಪುರ ಡಿ 3— ಒಂದಲ್ಕಂಡಿನ ಮೆಹಿಯಾರ್ ಸಂಸ್ಥಾನದ ರಾಜರು ತಮ್ಮ ಸಂಸ್ಥಾನದ ದೇವಾಲಯ ಮತ್ತು ಮಂದಿರವನ್ನು ಹರಿಜನರಿಗೂ ತೆರೆದಿದ್ದಾರೆ. ಅಲ್ಲದೆ ಅವರೇ ಹರಿಜನರೊಡನೆ ದೇವಾಲಯಕ್ಕೆ ಪ್ರವೇಶಿಸಿ, ಅವರ ಜೊತೆಯಲ್ಲೇ ಪ್ರಸಾದ ಸ್ವೀಕರಿಸಿದರು.

ಸಂಧಾನ ಪ್ರಯತ್ನ

ಬಟಾವಿಯಾ ಡಿ 3— ಡಚ್ ಮತ್ತು ಇಂಡೋನೇಷಿಯರ್ ಪ್ರತಿನಿಧಿಗಳ ಭೇಟಿಯು ಕ್ಷಿಪ್ರದಲ್ಲೇ ನಡೆಯಬಹುದೆಂದೂ ಏನಾದರೊಂದು ವ್ಯವಸ್ಥೆಯಾಗಬಹುದೆಂದೂ ಹೇಳಲಾಗಿದೆ.

ಪೌರಸಭಾ ಉಪಾಧ್ಯಕ್ಷತೆ

ಮೈಸೂರು ಡಿ 4— ಇಲ್ಲಿಯ ಪೌರಸಭಾ ಉಪಾಧ್ಯಕ್ಷತೆಯ ಉಮೇದುವಾರಿಕೆಗೆ ಅರ್ಜಿ ಸಲ್ಲಿಸಲು ಇಂದೇ ಕಡೇ ದಿನ. ಕಾಂಗ್ರೆಸ್ ಪಾರ್ಟಿ ಉಮೇದುವಾರರಾಗಿ ಶ್ರೀ ಎ. ಕೃಷ್ಣಮೂರ್ತಿ ರಾಯರು ಅರ್ಜಿ ಸಲ್ಲಿಸಿದರು. ಇನ್ಯಾರೂ ಉಮೇದುವಾರರಾಗಿ ನಿಂತಿಲ್ಲ.

ವ್ರತಭಂಗವಾಗಲಿಲ್ಲ

ಕಲ್ಕತ್ತಾ, ಡಿ 3 — ಗಾಂಧೀಜೀರವರು ಈ ದಿವಸ ಮೌನವ್ರತಾಚರಿಸಬೇಕಾದ ದಿನವಾಗಿರುವುದರಿಂದ ತಮ್ಮ ವ್ರತಕ್ಕೆ ಭಂಗತಂದುಕೊಳ್ಳದಂತೆ ಬಂಗಾಳ ಗೌರ್ನರ್ ಮಿ|| ಕೇಸಿಯರೊಡನೆ ಬರವಣಿಗೆ ವ್ಯವಹಾರ ನಡೆಸಿದರು.

ಹುರಿಯಾಳಿಕೆ ವಾಪಸು

ಕಲ್ಕತ್ತಾ, ಡಿ 3 — ಹಿಂದೂ ಮಹಾಸಭೆ ವತಿಯಿಂದ ಕಲ್ಕತ್ತಾ ಉಪನಗರಗಳ ಕ್ಷೇತ್ರದಿಂದ ಕೇಂದ್ರ ಸಭೆಗೆ ಚುನಾವಣೆಗಾಗಿ ನಿಂತಿದ್ದ ಡಾ || ಶ್ಯಾಮಪ್ರಸಾದ ಮುಖರ್ಜಿಯವರು ಅವರ ಆರೋಗ್ಯ ನಿಮಿತ್ತ ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದ ಫಲವಾಗಿ, ಅಲ್ಲೂ ಕಾಂಗ್ರೆಸಿಗೆ ವಿಜಯವಾಯಿತು.

ಅಮೇರಿಕದ ಯುದ್ಧಯತ್ನ

ಈ ಯುದ್ಧದಲ್ಲಿ ಅಮೇರಿಕವು ತಯಾರಿಸಿದ ಶಸ್ತ್ರಾಸ್ತ್ರಗಳೇ ಮೊದಲಾದುದಕ್ಕೆ ವಿವರವನ್ನು, ಅಲ್ಲಿಯ ಯುದ್ಧೋತ್ಪತ್ತಿ ಮಂಡಲದವರು ಪ್ರಕಟಿಸಿರುವರು: (1) ಬಾಂಬರ್ ವಿಮಾನಗಳು 97000 (2) ಇತರ ವಿಲಿಟರಿ ವಿಮಾನಗಳು 200000 (3) ಯುದ್ಧ ಹಡಗುಗಳು 71060 (4) ಟಾಂಕುಗಳು 86888 (5) ಟ್ರಕ್ಕುಗಳು 2435000 (6) ರೈಫಲುಗಳು 17400000 (7) ಬಾಂಬು ತೋಟಿಗಳು 41000000000 (8) ಕಾಲ್ಬೀಲಗಳು 250000000 ಜೋಡಿ (9) ಇರ ಬಟ್ಟೆಯ ಚಲ್ಲಣಗಳು 275000000 (10) ಉಣ್ಣೆಯ ಕಂಬಳಿಗಳು 4527000 — ಹೀಗಿದ್ದರೂ, ಪ್ರಜೆಗಳಿಗೆ ಯಾವ ಆನಾ ಸುಕೂಲತೆಯೂ ಇಂಲಿಲ್ಲ ಅಮೇರಿಕಾದಲ್ಲಿ ತಯಾರಾಗುತ್ತಿದ್ದವೆಲ್ಲ ವಸ್ತುಗಳಲ್ಲಿ ಸೇಕಡ 40 ಕ್ಕಿಂತ ಹೆಚ್ಚಿಗಿನದು ಯುದ್ಧಕ್ಕೆ ಉಪಯೋಗಿಸಲ್ಪಟ್ಟಿಲ್ಲ.

For Good Printing
L. N. Press
Sriramp et MYSORE

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಸರ್ ಕ್ಲಾಡ್ ಆರ್ಚ್‌ಲೀಕರು. ನೇಪಾಳದ ರಾಜರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Ranjit 2 nd Week

BANSARI

ಚಾರ್ಲಿ — ಈಶ್ವರಲಾಲ್ — ಷಮೋಮ್ — ದೀಕ್ಷಿತ್ — ಕೇಸರಿ ಮುಂತಾದವರು ಪಾತ್ರವಹಿಸಿರುವ

ಬನ್ಸರಿ

ಪ್ರತಿ ದಿನ 3 ಆಟಗಳು .... (ಹಿಂದಿ ಚಿತ್ರ)

AT Opera— Now running to crowded houses

Return of Fighting Hero

— with —

Herman Brix & Lynn Roberts

From 8-12-45 JITTERBUGS

with Laural & Hardy

Morning Shows From 7-12-45 — **Immortal Sergeant**